ಐದನೆಯ ಪಂಚವಾರ್ಷಿಕ ಯೋಜನೆ ಯಾವ ಗಾತ್ರ ಇರುತ್ತದೆ ಎಂಬುದನ್ನು ನೋಡಿಕೊಂಡು ಬಹುಶಃ ಕೇಂದ್ರ ಸರ್ಕಾರದವರು ಈ ವಿಚಾರದ ಬಗ್ಗೆ ಪ್ರತ್ಯೇಕವಾದ ಇಲಾಖೆಯನ್ನು ಮಾಡ ಬೇಕೆಂದು ಗೈಡ್ ಲೈನ್ಸ್‌ನಲ್ಲಿ ಆದೇಶ ಕೊಡುವುದಾದರೆ, ಆಗ ನಾವು ಅದನ್ನೂ ಕೂಡ ಪರಿಶೀಲನೆ ಮಾಡಬಹುದೆಂದು ನಾನು ಮಾನ್ಯ ಸದಸ್ಯಣಿಯವರಿಗೆ ಉತ್ತರ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಇಲಾಖೆಯನ್ನು ಕೇಂದ್ರ ಸರ್ಕಾರದವರು ಡೈರೆಕ್ಷನ್ ಕೊಟ್ಟರೆ ಮಾಡುವುದಾಗಿ ಹೇಳೋಣವಾಯಿತು. ಆ ಕೇಂದ್ರದವರ ಡೈರೆಕ್ಷನ್ ಕಾಯದೆ ರಾಜ್ಯ ಸರ್ಕಾರ ದವರೇ ಒಂದು ಈ ಪ್ರತ್ಯೇಕ ಇಲಾಖೆಯನ್ನು ತೆರೆಯುವುದಕ್ಕೇನು ತೊಂದರೆ ಇದೆ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಈಗ ಇರತಕ್ಕ ಇಲಾಖೆ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಕರೆಕ್ಷನಲ್ ಡೈರೆಕ್ಟರೇಟಿನಲ್ಲಿ 400 ಏಮೆನ್ ವೆಲ್‌ಫೇರ್ ಸೆಂಟರುಗಳು ಕೆಲಸ ಮಾಡುತ್ತಿವೆ; 54 ಟೈಲರಿಂಗ್ ಸೆಂಟರುಗಳು; 7 ಟೈಲರಿಂಗ್ ಪ್ರೊಡಕ್ಷನ್ ಸೆಂಟರುಗಳೂ ಕೆಲಸ ಮಾಡುತ್ತಿವೆ. 6 ಕಾಯರ್ ಸೆಂಟರುಗಳಿವೆ, 2 ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟುಗಳಿವೆ; ಮತ್ತು ಎರಡು ಲಾಕ್‌ಯೂನಿಟ್ಸ್‌ಗಳಿವೆ. 4 ಕ್ರಾಫ್ಟ್ಸ್ ಸೆಂಟರುಗಳಿವೆ—ಇಲ್ಲಿ ಬಿದಿರು ಮತ್ತು ಬೆತ್ತದ ಕ್ಯಾಗಾರಿಕೆ ಕೆಲಸಗಳು ನಡೆಯುತ್ತಿವೆ. ಈ ಎಲ್ಲಾ ಸೆಂಟರುಗಳಲ್ಲೂ ಹರಿಜನ ಗಿರಿಜನರಿಗೆ ಸಂಬಂಧಪಟ್ಟಂತೆ ಅವಿವಾಹಿತ ತಾಯಂದಿರಿಗೆ ಮಕ್ಕಳಿಗೆ, ಮತ್ತು ಡೆಲಿಕ್ವೆಂಟ್ ಮಕ್ಕಳಿಗೆ ತರಬೇತಿ ಯನ್ನು ಕೊಡಲಾಗುತ್ತಿದೆ. ಈ ಕೆಲಸಗಳನ್ನು ನಡಸುವುದಕ್ಕೆ ಇನ್ನು ಯಾವುದಾದರೂ ಖಾಸಗಿ ಸಂಸ್ಥೆಗಳು ಮುಂದೆ ಬಂದರೆ ಅವುಗಳಿಗೂ ಕೂಡ ಗ್ರ್ಯಾಂಟಿಂಗ್ ಗ್ರ್ಯಾಂಟ್ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀಮತಿ ನಾಗವ್ಮ ಸಿ. ಕೇಶವಮೂರ್ತಿ.—ಈಗ ಈ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಐದಾರು ಇಲಾಖೆಗಳಿಗೆ ವಹಿಸಿರುವುದರಿಂದ, ಈ ಕೆಲಸಗಳು ದಕ್ಷತೆಯಿಂದ ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ಇದಕ್ಕೇ ಒಂದು ಪ್ರತ್ಯೇಕ ಇಲಾಖೆಯನ್ನು ಏಕೆ ಮಾಡಬಾರದು?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ದಕ್ಷತೆಯ ಪ್ರಶ್ನೆಗೆ ಉತ್ತರ ಕೊಡಬೇಕೆಂದರೆ ನಮ್ಮ ದೇಶದಲ್ಲೇ ಆಗಲೀ ಅಥವಾ ಬೇರೆ ದೇಶದಲ್ಲೇ ಆಗಲೀ ಯಾರು ಈ ಬೆನಿಫಿಷಿಯರೀಸ್ ಎನ್ನತಕ್ಕ ವರಿದ್ದಾರೋ ಅವರು ಎಲ್ಲಿಯವರೆಗೆ ಎನ್‌ಲೈಟೆಂಡ್ ಆಗುವುದಿಲ್ಲವೋ ಮತ್ತು ಎಲ್ಲಿಯವರೆಗೆ ಅವರಲ್ಲಿ ಒಂದು ಸ್ಟ್ರಾಂಗ್ ಆರ್ಗನೈಜೇಷನ್ ಆಗುವುದಿಲ್ಲವೋ ಆಲ್ಲಿಯವರೆಗೂ ಸರ್ಕಾರಗಳು ಕೊಡತಕ್ಕ ಸೌಲಭ್ಯಗಳನ್ನು ಜನರು ಹೇಗೆ ದುರುಪಯೋಗ ಪಡಿಸಿಕೊಳ್ಳುತ್ತಾರೆ ಎಂಬುದನ್ನು ನಾವು ಇಂದು ಕಣ್ಣಾರೆ ಕಾಣುತ್ತಿರುವಾಗ, ನಾನು ಹೇಳಿದಂತೆ ಅವರಲ್ಲಿ ಒಂದು ಈ ಜಾಗ್ರತಿಯುಂಟಾದರೆ ಇರತಕ್ಕ ಇಲಾಖೆಗಳಲ್ಲೇ ಇವರ ಕೆಲಸಗಳನ್ನು ಇನ್ನೂ ಉತ್ತಮ ಮಟ್ಟದಲ್ಲಿ ಮಾಡುವುದಕ್ಕೆ ಅವಕಾಶವಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ASSISTANCE TO THE COBBLERS OF NORTH KANARA DISTRICT.

934. Smt. RADHA BHAT (Ankola).—

Will the Minister for Industries be pleased to state:—

(*a*) the number of cobblers dependent on this profession in North Kanara district; the mode of assistance the Government is granting them for the development of their industry;

(*b*) whether it has come to the notice of the Government that the Cobblers in Ankola taluk are in distressed condition; if so, the mode of interim relief the Government proposes to grant them?

Sri S. M. KRISHNA (Minister for Industries). —

(*a*) 1156.

The Government is granting loans and subsidy through Cobblers Co-operative Societies. Khadi Board and Khadi Commission are also granting assistance to the cobblers.

(*b*) No.

ಶ್ರೀಮತಿ ರಾಧಾ ಭಟ್.—ಇಲ್ಲಿ ಸರ್ಕಾರದವರು ತಿಳಿಸಿರತಕ್ಕ ಸಹಕಾರ ಸಂಘಗಳೇನಿವೆ ಅವುಗಳಿಂದ ಚರ್ಮಕಾರರಿಗೆ ಯಾವ ಎಧವಾದ ಹಣಕಾಸಿನ ಸೌಲಭ್ಯವೂ ಒದಗದೆ ಇರುವುದರಿಂದ ಇವರ ಜೀವನ ಬಹಳ ಕಷ್ಟಕ್ಕೆ ಗುರಿಯಾಗಿ ತೊಂದರೆ ಪಡುತ್ತಿರುವ ಎಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

†ಶ್ರೀ ಎಸ್. ಎಂ. ಕೃಷ್ಣ.—ಬಂದಿದೆ.

ಶ್ರೀಮತಿ ರಾಧಾ ಭಟ್.—ಇವರಿಗೆ ಇಲ್ಲಿಯವರೆಗೂ ಈ ಸಂಘ ಸಂಸ್ಥೆಗಳಿಂದ ನೀಡಿರತಕ್ಕ ಸಾಲದ ಮೊತ್ತವೆಷ್ಟು ?

ಶ್ರೀ ಎಸ್. ಎಂ. ಕೃಷ್ಣ.—ಆ ಮೊಬಲಗು ಎಷ್ಟೆಂಬುದು ತಕ್ಷಣಕ್ಕೆ ನನ್ನಲ್ಲಿಲ್ಲ. ಈ ಚರ್ಮಗಾರರಿಗೆ ಮೈಸೂರು ಖಾದೀ ಬೋರ್ಡಿನ ಮೂಲಕ ಮತ್ತು ಕಮಿಷನ್ ಖಾದಿ ಮತಿಯಿಂದಲೂ ಮತ್ತು ಸಹಕಾರ ಸಂಘಗಳ ಮತಿಯಿಂದಲೂ ಸಾಲ ಮತ್ತು ಸಬ್ ಸಿಡಿಗಳನ್ನು ಕೊಡಿಸುತ್ತಾ ಬಂದಿತು. ಆದರೆ ಸರ್ಕಾರಕ್ಕೆ ಬಂದಿರತಕ್ಕ ವರದಿಗಳ ಪ್ರಕಾರ ಈ ಚರ್ಮಕಾರರು ಈ ಲೆದರ್ ಕೋ ಆಪರೇಟೀವ್ ಸೊಸೈಟಿಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಡಿಫಾಲ್ಟರಾಗಿರುವುದರಿಂದ ಇವರಿಗೆ ಈ ಸಹಕಾರ ಸಂಸ್ಥೆಗಳಿಂದ ಆಷ್ಟೇನೂ ಪ್ರಯೋಜನವಾಗಲಲ್ಲ ಎಂಬುದಾಗಿ ತಿಳಿದು ಬಂದಿದೆ. ಆದುದರಿಂದಲೇ ಈಗ ಸರ್ಕಾರದವರು ಇವರ ಸಹಾಯಕ್ಕಾಗಿ ಒಂದು ಲೆದರ್ ಡೆವಲಪ್‌ಮೆಂಟ್ ಬೋರ್ಡನ್ನು ತೆರೆಯಬೇಕೆಂದು ತೀರ್ಮಾನ ಮಾಡಿದ್ದಾರೆ. ಅದಕ್ಕೆ ಆದಷ್ಟು ಶೀಘ್ರದಲ್ಲೇ ಹಣ ಕಾಸಿನ ವ್ಯವಸ್ಥೆಯನ್ನು ಒದಗಿಸುವುದರಲ್ಲಿ ಸರ್ಕಾರದವರು ನಿರತರಾಗಿದ್ದಾರೆ.

ಶ್ರೀ ಜೆ. ಎರ್. ಕಬಾಡಿ.—ಉತ್ತರ ಕರ್ನಾಟಕ ಜಿಲ್ಲೆಯಲ್ಲಿ 1156 ಜನ ಚರ್ಮಕಾರರಿದ್ದಾರೆ ಎಂದು ಹೇಳೋಣವಾಗಿದೆ. ಆದರೆ ಅದು ನಿಜವಲ್ಲ, ಅಲ್ಲಿ ಇನ್ನೂ ಹೆಚ್ಚು ಮಂದಿ ಇದ್ದಾರೆ. ಸರ್ಕಾರದವರು ಕೇಂದ್ರದಿಂದ ಸೆಂಟ್ರಲ್ ಲೆದರ್ ರಿಸರ್ಚ್ ಬ್ಯೂರೊ ಇಂದ ಇದರ ಹೆಚ್ಚಿನ ಮಾಹಿತಿಗಳನ್ನು ತಾವು ತರಿಸಿಕೊಳ್ಳಬಹುದು. ಆದರೆ ಈ ತಹಲ್‌ವರೆಗೆ ಖಾದೀ ಬೋರ್ಡಿನಿಂದ ಅಂಕೋಲ ತಾಲ್ಲೂಕಿನಲ್ಲಿ ಇವರಿಗೆ ದೊರತಿರುವ ಸಬ್‌ಸಿಡಿ ಮತ್ತು ಸಾಲದ ಮೊಬಲಗೆಷ್ಟು ?

ಶ್ರೀ ಎಸ್. ಎಂ. ಕೃಷ್ಣ.—ನೋಟೀಸ್.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗತಾನೇ ಮಾನ್ಯ ಸಚಿವರು ಅಷ್ಟಣೆ ಕೊಡಿಸಿದ ಲೆದರ್ ಡೆವಲಪ್‌ಮೆಂಟ್ ಬೋರ್ಡಿನ ರೂಪರೇಖೆಗಳೇನು ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಎಂ. ಕೃಷ್ಣ.—ಈ ಚರ್ಮದ ವ್ಯವಹಾರದಲ್ಲಿ ಯಾರು ಯಾರಿಗೆ ಇಂಟ್ರೆಸ್ಟ್ ಇದೆಯೋ ಅಂಥವರನ್ನೆಲ್ಲಾ ಇದರಲ್ಲಿ ಪ್ರತಿನಿಧಿಗಳನ್ನಾಗಿ ಇಡಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಚರ್ಮದ ವ್ಯವಹಾರದಲ್ಲಿ ಯಾರು ಯಾರಿಗೆ ಅನಕ್ತ ಇದೆಯೊ ಅಂಥವರನ್ನು ಅದರಲ್ಲಿ ಪ್ರತಿನಿಧಿಗಳನ್ನಾಗಿ ಮಾಡುತ್ತಿರೋ ಅಥವಾ ಅದರಲ್ಲಿ ಅನುಭವಶಾಲಿಗಳಾದವರನ್ನು ಅದಕ್ಕೆ ತೆಗೆದುಕೊಳ್ಳುತ್ತೀರೋ ?

ಶ್ರೀ ಎಸ್. ಎಂ. ಕೃಷ್ಣ.—ಉಭಯತ್ರರನ್ನೂ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.—ಇಲ್ಲಿ ಸೂಚಿಸಿರತಕ್ಕ 1156 ಜನರೂ ಸಾಲ ಪಡೆದಿದ್ದಾರೆಯೇ ? ಹಾಗೆ ಪಡೆದ್ದಿದ್ದರೆ ಆ ಪಟ್ಟಿಯನ್ನು ಸಭೆಯ ಮುಂದಿಡಲಾಗುವುದೇ ?

ಶ್ರೀ ಎಸ್. ಎಂ. ಕೃಷ್ಣ.—ಕೆಲವರು ಸಾಲ ಪಡೆದಿರಬಹುದು, ಕೆಲವರು ಪಡೆಯದಿರಬಹುದು ಎಲ್ಲರೂ ಸಾಲ ಪಡೆದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಪ್ರತ್ಯೇಕ ಪ್ರಶ್ನೆಕೇಳಿ, ಉತ್ತರ ಒದಗಿಸಲಾಗುತ್ತೆ.

ಶ್ರೀ ಜೆ. ಎಲ್. ಕಬಾಡಿ.—ಈಗತಾನೆ ಮಾನ್ಯ ಸಚಿವರು ಅಪ್ಪಣೆ ಕೊಡಿಸಿದ ಲೆದರ್ ಡೆವಲಪ್‌ಮೆಂಟ್ ಬೋರ್ಡು ಅಸ್ತಿತ್ವಕ್ಕೆ ಬರಬೇಕಾದರೆ ಇನ್ನೂ 4-5 ತಿಂಗಳ ಕಾಲ ಹಿಡಿಯುವುದರಿಂದ ಅಲ್ಲಿ ಈ ಚರ್ಮಕಾರರ ಪರಿಸ್ಥಿತಿ ಬಹಳ ಹದಗೆಟ್ಟಿರುವುದರಿಂದ ತಾತ್ಕಾಲಿಕವಾಗಿ ಇವರಿಗೆ ಕೈಗಾರಿಕಾ ಇರಾಖೆಯಿಂದ ಸಾಲವನ್ನು ಕೊಡುವಂತೆ ಮಾಡುವುದಕ್ಕೆ ಸರ್ಕಾರದವರು ಏಕೆ ಒಂದು ವ್ಯವಸ್ಥೆ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಅದು ಸಾಧ್ಯವಿಲ್ಲ. ಆದಷ್ಟೂ ಜಾಗ್ರತೆಯಾಗಿ ಅವರ ಹಿತಾಸಕ್ತಿಯನ್ನು ಕಾಪಾಡಬೇಕೆಂತಲೇ ಸರ್ಕಾರದವರೀಗ ಈ ಲೆದರ್ ಡೆವಲಪ್‌ಮೆಂಟ್ ಬೋರ್ಡನ್ನು ಮಾಡುತ್ತಿರುವುದು. ಅದನ್ನು ಮಾಡಿ ಅವರ ಹೆಗಲ ಮೇಲೆ ಇದರ ಜವಾಬ್ದಾರಿಯನ್ನು ಹೊರಿಸಬೇಕೆಂಬುದು ಸರ್ಕಾರದವರ ಇಚ್ಛೆ.

ಶ್ರೀ ಜೆ. ಎಲ್. ಕಬಾಡಿ.—ಇಲ್ಲವೇ ಸರ್ಕಾರದವರು ಲೆದರ್ ಬೇಸ್ಡ್ ಇಂಡಸ್ಟ್ರೀಸ್ ಅಂತ ಲಾದರೂ ಒಂದು ಮಾಡಿ ಇಲ್ಲವೇ ಲೆದರ್ ಫೈನಾನ್ಷಿಯಲ್ ಕಾರ್ಪೊರೇಷನ್ ಎಂದು ಮಾಡಿ ಇವರಿಗೆ ಸಹಾಯ ಮಾಡುವುದಕ್ಕೆ ಒಂದು ಏರ್ಪಾಡನ್ನು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಸರಕಾರದವರು ಆ ಡೆವಲಪ್‌ಮೆಂಟ್ ಬೋರ್ಡಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಹಣವನ್ನು ಸಹಾಯ ಮಾಡುವಂತೆ ಮಾಡಲು ಏರ್ಪಾಡನ್ನು ಮಾಡುತ್ತಿದ್ದಾರೆ.

ಶ್ರೀಮತಿ ರಾಧಾ ಭಟ್.—ಚರ್ಮಗಾರರಿಗೆ ನೆರವನ್ನು ಹೆಚ್ಚಿಸಲಾಗುವುದೇ ? ಅಂಕೋಲ ತಾಲ್ಲೂಕಿನಲ್ಲಿ ಚರ್ಮಕಾರರಿಗೆ ಬಹಳ ಕಷ್ಟವಿದೆ. ಅವರ ಕಷ್ಟ ಪರಿಹಾರ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎಸ್. ಎಂ. ಕೃಷ್ಣ.—ಅಂಕೋಲ ತಾಲ್ಲೂಕಿನಲ್ಲಿ ಮೂರು ಸೊಸೈಟಿಗಳಿವೆ. ಅವುಗಳಲ್ಲಿ ಒಂದು ಕೆಲಸಮಾಡುತ್ತಿದೆ, ಎರಡು ಕೆಲಸ ಮಾಡುತ್ತಿಲ್ಲ. ಈಗ ಕೆಲಸಮಾಡುತ್ತಿರುವ ಸೊಸೈಟಿಗೆ ಖಾದಿ ಬೋರ್ಡ್‌ನಿಂದ ಸಹಾಯವಾಡಲು ಏರ್ಪಾಡು ಮಾಡಬಹುದು. ಆದರೆ ಕೆಲಸ ಮಾಡದಿರುವ ಸೊಸೈಟಿ ಪುನರುಜ್ಜೀವಗೊಳಿಸಿ ಅವುಗಳು ತಮ್ಮ ಕಾಲಮೇಲೆ ನಿಂತುಕೊಳ್ಳುವಂತೆ ಮಾಡಲು ಸಾಧ್ಯವೇ ಎಂದು ಖಾದಿ ಬೋರ್ಡು ಪರಿಶೀಲಿಸುವಂತೆ ತಿಳಿಸುತ್ತೇವೆ.

MADAM SPEAKER.—Question No. 474 is held over.

APPOINTMENT TO THE POST OF PRINCIPAL OF S. J. POLYTECHNIC, BANGALORE.

974. Sri H. G. CHANNAPPA (Magadi).—

Will the Minister for Education be pleased to state :—

(*a*) whether the post of Principal of S. J. Polytechnic Bangalore has been upgraded ; if so, to what grade ;

(*b*) whether the person holding this post at present is the senior most officer in the Department ; if not, the reasons for appointing him to this post ;

(*c*) whether the cadre and recruitment rules in respect of this post have been framed ; if not, the reason for the same and the action taken to frame the Cadre and Recruitment Rules ?